ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ
ಸಿ.ಸಿ. 526-2017

| | | | |
|---|---|---|---|
| ಸಾಕ್ಷಿಯ ಹೆಸರು | ಃ ಎಂ.ಮಲ್ಲಿಕಾರ್ಜುನ | ಪ್ರಾ ಸಾ | ಃ 01 |
| ತಂದೆ/ಗಂಡನ ಹೆಸರು | ಃ ಮಲ್ಲಯ್ಯ | ಚಾ ಸಾ | ಃ 02 |
| ವಯಸ್ಸು | ಃ 60 ವರ್ಷ | | |
| ವೃತ್ತಿ | ಃ ನಿವೃತ್ತ ವಿಶೇಷ ಭೂ-ಸ್ವಾಧೀನಾಧಿಕಾರಿ | | |
| ವಾಸಸ್ಥಳ | ಃ ಹಿರೇಹಳ್ಳಿ ಗ್ರಾಮ | | |

ಸಾಕ್ಷಿಗೆ ದಿನಾಂಕಃ 04.08.2023 ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎ ಪಿ ಪಿ ರವರಿಂದ

ನಾನು ದಿ. **07.03.2014** ರಿಂದ **21.08.2015** ರವರೆಗೆ ಶ್ರೀರಂಗಪಟ್ಟಣದಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **12.03.2015** ರಂದು ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಹೋಬಳಿ, ಜಕ್ಕನಹಳ್ಳಿ, ಚನ್ನನಕೆರೆ, ಇತ್ಯಾದಿ ಗ್ರಾಮಗಳ ಸರಹದ್ದಿನಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದಾಗಿ ಬಂದ ಸಾರ್ವಜನಿಕ ಮೌಖಿಕ ದೂರಿನ ಮೇರೆಗೆ ಭೂ-ವಿಜ್ಞಾನಿ ಇಲಾಖೆಯ ಭೂ-ವಿಜ್ಞಾನಿ ನಾಗೇಶ, ವಲಯ ಅರಣ್ಯಾಧಿಕಾರಿ ಮರಿಸ್ವಾಮಿ, ಅರಣ್ಯ ರಕ್ಷಕ ಶಿವಸಿದ್ದು, ರಾಜಶ್ವ ನಿರೀಕ್ಷಕರಾದ ಗಣೇಶ, ಗ್ರಾಮ ಲೆಕ್ಕಿಗರಾದ ಸೀಮಾ ಹಾಗೂ ಉಪನೀರಿಕ್ಷಕರಾದ ಶಿವರುದ್ರ ಇವರೊಂದಿಗೆ ಜಕ್ಕನಹಳ್ಳಿ ಗ್ರಾಮದ ಸರ್ವೆ ನಂ.**83** ರ ಬಳಿ ಮ.**2.30** ಗಂಟೆಗೆ ಸ್ದಳ ಪರಿಶೀಲನೆಗಾಗಿ ಭೇಟಿ ನೀಡಿದ್ದು ಆ ಸಂದರ್ಭದಲ್ಲಿ ಸರ್ವೆ ನಂ.**83/18** ಪಿ-**3** ರಲ್ಲಿ ಜವರೇಗೌಡ, **83/**ಪಿ-**16** ರಲ್ಲಿ ವಿಷಕಂಠ, **83/**ಪಿ-**4,** ಶಿವಮೂರ್ತಿ **83/**ಪಿ-**1**-ಪಿ-**1** ಚೌಡಯ್ಯ ರವರ ಜಮೀನುಗಳಲ್ಲಿ ಗುಂಡಿ (ಹೊಂಡ) ಮಾಡಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದು ನಮ್ಮಗಳನ್ನು ನೋಡಿ ಸಾಮಾನುಗಳು ಜೊತೆ

ಓಡಿಹೋಗಿರುತ್ತಾರೆ. ನಂತರ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಅಲ್ಲಿನ ಭೂ-ವಿಜ್ಞಾನಿ ಚಾ ಸಾ1 ರವರಿಗೆ ದೂರು ದಾಖಲಿಸುವಂತೆ ತಿಳಿಸಿರುತ್ತೇವೆ. ಚಾ ಸಾ 4 ರವರು ಸ್ಥಳದಲ್ಲಿ ಜರುಗಿಸಿದ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿಗೆ 1 ರಿಂದ 4 ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 1 ಬಿ, 2 ಬಿ, 3 ಬಿ, 4 ಬಿ ಎಂದು ಗುರುತಿಸಲಾಯಿತು. ಈ ಪ್ರಕರಣದ ವಿಚಾರವಾಗಿ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾ.ದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನನಗೆ ಸಾರ್ವಜನಿಕರಿಂದ ಮಾಹಿತಿ ಬಂದಿರುತ್ತದೆ. ನನಗೆ ಮಾಹಿತಿ ಬಂದಾಗ ಕಛೇರಿಯಲ್ಲಿದ್ದೆನು. ನಾವು 4 ಇಲಾಖಾ ವಾಹನಗಳಲ್ಲಿ ಸುಮಾರು 7 ಜನ ಹೋಗಿರುತ್ತೇವೆ. ಪೋಲೀಸ್ ಅಧಿಕಾರಿಗಳು ಮತ್ತು ಅರಣ್ಯ ಸಿಬ್ಬಂದಿಗಳು ಸಮವಸ್ತ್ರದಲ್ಲಿದರು. ನಮ್ಮ ಜೊತೆ ಜೀಪ್ ನ ಚಾಲಕರು ಪ್ರತ್ಯೇಕವಾಗಿ ಇದ್ದರು ಎಂದರ ಸರಿ. ಚಾಲಕರ ಹೆಸರುಗಳು ನನಗೆ ಗೊತ್ತಿಲ್ಲ ನಮ್ಮ ವರದಿಯಲ್ಲಿ ಹಾಗೂ ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಕರ್ತವ್ಯದಲ್ಲಿದ್ದು ಸ್ಥಳ ಪರಿಶೀಲನೆಗೆ ಹೋದಾಗ ಪ್ರಭಾರ ಯಾರಿಗೂ ನೀಡುವುದಿಲ್ಲ. ನಮ್ಮ ಕಛೇರಿಯಲ್ಲಿ ಕಛೇರಿ ದಿನಚರಿ ಮಾಡುತ್ತೇವೆ. ಕಛೇರಿ ದಿನಚರಿಯನ್ನು ನ್ಯಾ.ಕ್ಕೆ ಹಾಜರುಪಡಿಸಿಲ್ಲ, ನಾವು ಯಾವುದೇ ಪ್ರಕರಣಗಳಲ್ಲಿ ಅದನ್ನು ಹಾಜರುಪಡಿಸಿರುವುದಿಲ್ಲ ಹಾಜರುಪಡಿಸಲು ತೊಂದರೆ ಇಲ್ಲ. 4 ಇಲಾಖಾ ವಾಹನಗಳ ನೊಂದಣಿ ಸಂಖ್ಯೆ ಹೇಳಲು ಆಗುವುದಿಲ್ಲ. ಮಹಜರ್ ಗಳಲ್ಲಿ ಸರ್ವೆ ನಂಬರ್ ಗಳ ಚೆಕ್ಕುಬಂದಿ ನಮೂದಿಸಿಲ್ಲ ಎಂದರೆ ಸರಿ. ಮಹಜರ್ ಯಾರ

ಬರವಣಿಗೆಯಲ್ಲಿ ಬರೆಯಲ್ಪಟ್ಟಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಎಲ್ಲರ ಬಳಿಯೂ ಸ್ಮಾರ್ಟ್ ಫೋನ್ ಇತ್ತು ಎಂದರೆ ಸರಿ. ನಾವು ಗಣಿಗಾರಿಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ವೇಳೆ ಹಾಗೂ ಮಹಜರ್ ಕಾಲದಲ್ಲಿ ಯಾವುದೇ ಛಾಯಗ್ರಹಣ ಮಾಡಿರುವುದಿಲ್ಲ. ಸ್ಥಳ ಪರಿಶೀಲನೆ ಮಾಡಿದ ನಂತರ ಸ್ಥಳದಲ್ಲಿದ್ದ ಗಣಿಗಾರಿಕೆ ಸಂಬಂಧಿಸಿದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮಹಜರ್ ಕಾಲದಲ್ಲಿ ಸ್ಥಳ ನಕ್ಷೆಯನ್ನು ತಯಾರಿಸಿಲ್ಲ ಎಂದರೆ ಸರಿ. ನನ್ನ ವ್ಯಾಪ್ತಿಯಲ್ಲಿರುವ ಗ್ರಾಮಗಳ ಸರ್ವೆ ನಂಬರ್ ಗಳು ಮತ್ತು ಅಲ್ಲಿನ ಜಮೀನುಗಳ ಬೆಳೆ ಮತ್ತು ವ್ಯವಹರಣೆ ಬಗ್ಗೆ ಗೊತ್ತಿರುತ್ತದೆ. ನಾವು ಸ್ಥಳಕ್ಕೆ ಭೇಟಿ ನೀಡಿದಾಗ ಸಾರ್ವಜನಿಕರು ಬಂದಿದ್ದರು ಎಂದರೆ ಸರಿ. ಸಾರ್ವಜನಿಕರನ್ನು ಪಂಚನಾಮೆ ಕಾಲದಲ್ಲಿ ನಮ್ಮ ವರದಿಯಲ್ಲಿ ಹಾಜರಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಆರೋಪಿತರ ಹೆಸರು ಖುದ್ದು ಪರಿಚಯವಿಲ್ಲ ಎಂದರೆ ಸರಿ. ಸರ್ವೆ ನಂಬರ್ ಗಳ ಬಗ್ಗೆ ನನಗೆ ಮಾಹಿತಿ ಇದ್ದು ನಾನು ದಾಳಿಯಲ್ಲಿ ಭಾಗವಹಿಸಿದ್ದೆ ಅಕ್ರಮ ಗಣಿಗಾರಿಕೆ ನಡೆಯುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಿಂದ 4 ನ್ನು ದಿ. 12.03.2015 ರಂದು ಭೇಟಿ ನೀಡಿದ ದಿನದಂದೇ ಮಾಡಿದ್ದೇವೆ ಎಂದರೆ ಸರಿ. ನಿಪಿ 5 ರಿಂದ 8 ಮಹಜರ್ ಗಳನ್ನು ನಾನು ಮಾಡಿರುವುದಿಲ್ಲ, ತನಿಖಾಧಿಕಾರಿಗಳು ಮಾಡಿರುತ್ತಾರೆ. ನಾನು ಪೋಲಿಸರ ಮುಂದೆ 18.03.2015 ನೇ ತಾರೀಖು ನಮ್ಮ ಕಛೇರಿಯಲ್ಲಿ ಹೇಳಿಕೆ ನೀಡಿರುತ್ತೇನೆ. ಸಮಯ ನೆನಪಿರುವುದಿಲ್ಲ. ದಾಳಿಯಲ್ಲಿ ನಮ್ಮ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆ ಸಾರ್ವಜನಿಕರನ್ನು ನಾವು ಕರೆದುಕೊಂಡು ಹೋಗಿಲ್ಲ ಎಂದರೆ ಸರಿ. ನಿಪಿ 1 ರಿಂದ 4 ನ್ನು ಬರೆದಿರುವ ಸಮಯವನ್ನು ನಮೂದು ಮಾಡಿರುತ್ತೇವೆ. ನಿಪಿ 1 ರಿಂದ 4 ರಲ್ಲಿ ಸಮಯ

ನಮೂದಿಸಿಲ್ಲದಿದ್ದರೂ ಉತ್ಪ್ರೇಕ್ಷೆಯಿಂದ ನಮೂದು ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿಯಲ್ಲಿ ಭಾಗವಹಿಸದೆ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಳ್ಳದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ನಾನು ದಾಳಿಗೆ ಹೋಗದಿದ್ದರೂ ಹೋಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಕ್ರಮ ಗಣಿಗಾರಿಕೆ ಮಾಡದೆ ಇದ್ದರೂ ನನ್ನ ಅಧಿಕಾರ ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರುಗಳು ಸದರಿ ಜಮೀನುಗಳಲ್ಲಿ ವ್ಯವಸಾಯಗಾರರೆಂದರೆ ಸರಿ. ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿದ್ದು ಅವುಗಳಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ.